ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ಕುಂದಾಪುರದಲ್ಲಿ ಬಸ್ ಡಿಪೋವಿನ ಕಾರ್ಯಾರಂಭವಾಗಿದೆ.

ಆ) ಮತ್ತು ಇ) ಉದ್ಭವಿಸುವುದಿಲ್ಲ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ, ಈ ಬಸ್ ಡಿಪೊ ಕಾರ್ಯಾರಂಭವಾಗಿದೆ, ಅಲ್ಲಿ ಒಂದು ಬಸ್ ಸ್ಟ್ಯಾಂಡಿನ ಅವಶ್ಯಕತೆ ಇದೆ. ಅದನ್ನು ಮಾಡಲಿಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ? ಬಸ್ ಡಿಪೊ ಉದ್ಘಾಟನಾ ಸಮಾರಂಭದ ದಿವಸ ಎಲ್ಲರ ಬೇಡಿಕೆಗ ಅನುಗುಣವಾಗಿ ಮಾನ್ಯ ಮಂತ್ರಿಗಳು ಅನೇಕ ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಕುಂದಾಪುರದಿಂದ ಬೆಂಗಳೂರಿಗೆ ಹೋಗುವಂಥ ಬ್ಸಿನ ವೇಳೆಯನ್ನು ಸ್ವಲ್ಪ ವಿಳಂಬ ಮಾಡುವ ಬಗ್ಗೆ ಮತ್ತು ಹೊಸ ಹೊಸ ಕೆಲವು ಬಸ್‌ಗಳ ರೂಟನ್ನು ಪ್ರಾರಂಭ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದರು. ಅದರ ಪ್ರಕಾರ ಕಾರ್ಯಾಚರಣೆ ಆಗುತ್ತಾ ಇದೆಯೇ ? ಆ ಸಮಾರಂಭದಲ್ಲಿ ಸ್ಥಳೀಯ ಪುರಸಭಾಧ್ಯಕ್ಷರನ್ನು ಅವಹೇಳನಗೊಳಿಸಲಾಯಿತು ಎಂಬ ದೂರು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಕುಂದಾಪುರದಲ್ಲಿ ಬಸ್ ನಿಲ್ದಾಣ ಕಟ್ಟಬೇಕು ಎನ್ನುವ ವಿಚಾರ ಸಾರಿಗೆ ಸಂಸ್ಥೆ ಮುಂದೆ ಇದೆ. ಅದಕ್ಕೆ ಬೇಕಾಗಿರತಕ್ಕಂಥ ಸ್ಥಳ ಇನ್ನೂ ಸಿಗದೇ ಇರುವುದರಿಂದ ತಡವಾಗಬಹುದು. ಮತ್ತೆ ನಾನು ಅವತ್ತಿನ ಸಮಾರಂಭದಲ್ಲಿ ಹೊಸದಾಗಿ ಕೆಲವು ಬಸ್‌ಗಳ ರೂಟನ್ನು ಪ್ರಾರಂಭ ಮಾಡುವುದರ ಬಗ್ಗೆ ಮತ್ತು ಇನ್ನಿತರ ವಿಚಾರಗಳ ಬಗ್ಗೆ ಏನು ಪ್ರಸ್ತಾಪ ಮಾಡಿ ತಿಳಿಸಿದ್ದೇನೆ ಅವೆಲ್ಲವೂ ಸಹಿತ ಆದಷ್ಟು ಬೇಗ ಕಾರ್ಯಾಚರಣೆಯಾಗುತ್ತವೆ. ಆ ಸಮಾರಂಭದಲ್ಲಿ ಪುರಸಭಾಧ್ಯಕ್ಷರನ್ನು ಕರೆದಿರಲಿಲ್ಲ ಎನ್ನುವ ಮಾತೂ ಸಹಿತ ನನಗೆ ತಿಳಿದು ಬಂದಿದೆ. ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸಾರಿಗೆ ಸಂಸ್ಥೆಯ ಯಾವುದೇ ಕಾರ್ಯಕ್ರಮಗಳು ಆದಾಗ, ಅಂತಹ ಸಂದರ್ಭದಲ್ಲಿ ಸ್ಥಳೀಯ ಪುರಸಭಾಧ್ಯಕ್ಷರನ್ನು ಕರೆಯಲಿಕ್ಕೆ ಸೂಚ್ನೋಲೆಯನ್ನೂ ಸಹ ಕಳಿಸಿದ್ದೇನೆ.

೨೭೦೭ ಮಾನ್ಯ ಸದಸ್ಯರು ಗೈರುಹಾಜರು.

ಸ್ನಾತಕೋತ್ತರ ಪ್ರವೇಶ ದೊರಕಿಸಿ ಕೊಡುವುದರ ಬಗ್ಗೆ

೨೦೮೭. ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ (ಗುರುಮಿಟ್‌ಕಲ್).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಸ್ನಾತಕೋತ್ತರ ಪ್ರವೇಶ ದೊರಕಿಸಿ ಕೊಡುವುದಾಗಿ ಭರವಸೆ ನೀಡಿ ಅವ್ಯವಹಾರ ನಡೆಸಿದ್ದಾರೆಂಬ ಆಪಾದನೆ ಬಗ್ಗೆ ಸರ್ಕಾರವು ರಚಿಸಿದ್ದ ಏಕ ಸದಸ್ಯ ಆಯೋಗದ ಜಸ್ಟೀಸ್ ಪುಟ್ಟಸ್ವಾಮಿಯವರು ರಾಜೀನಾಮೆ ನೀಡಲು ಕಾರಣಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

(ಅ) ವಿವಾದಾತ್ಮಕ ಸಂಪಾದಕೀಯವೊಂದು ಪತ್ರಿಕೆಯಲ್ಲಿ ಪ್ರಕಟವಾದ ನಂತರ ಅವರ ನಿಶ್ಪಕ್ಷಪಾತವಾದ ನಿಲುವನ್ನು ಪ್ರಶ್ನಿಸಿ ನೀಡಿದ ಕೆಲವು ಹೇಳಿಕೆ ಪ್ರಯುಕ್ತ ಜಸ್ಟೀಸ್ ಪುಟ್ಟಸ್ವಾಮಿಯವರು ರಾಜಿನಾಮೆ ನೀಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಮಾನ್ಯ ಮುಖ್ಯಮಂತ್ರಿಗಳಿಗೆ ಸೇರುತ್ತದೆ. ತಿಯೋಗವನ್ನು ನೇಮಕ ಮಾಡುವಂಥಾದ್ದು, ಮುಖ್ಯಮಂತ್ರಿಗಳ ಖಾತೆಗೆ ಬರುತ್ತದೆ. The reasons given by Justice Puttaswamy for his resignation from the One Man Commission constituted by Government to probe into Medical M. D. Seat scandal. ಇದು ಹೆಲ್ತ್ ಡಿಪಾರ್ಟಮೆಂಟಿಗೆ ಬರುವುದಿಲ್ಲ.

ಶ್ರೀ ಬಿ. ರಾಚಯ್ಯ.—ಸ್ವಾಮಿ, ಈ ವಿಷಯ ನನ್ನ ಇಲಾಖೆಗೆ ಸಂಬಂಧಪಟ್ಟಿದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಕಮೀಷನ್ ಬಗ್ಗೆ ಕೇಳಿದ್ದೇವೆ. ಸೀಟಿನ ಬಗ್ಗೆ ಕೇಳಲಿಲ್ಲ. ಎಷ್ಟು ಸೀಟು ಅಲಾಟ್‌ಮೆಂಟ್ ಮಾಡಿದ್ದೀರಂದು ನಾವು ಕೇಳಿಲ್ಲ. ಜಸ್ಟೀಸ್ ಪುಟ್ಟಸ್ವಾಮಿಯವರು ಏತಕ್ಕೆ ರಾಜಿನಾಮೆ ಕೊಟ್ಟರಂ ? ಇನ್ನೊಂದು ಕಮಿಟಿ ನೇಮಕ ಮಾಡಿದ್ದಾರೆ, ಇದು ನಿಮ್ಮ ಖಾತೆಗೆ ಬರುವುದಿಲ್ಲ. ಅದಕ್ಕೆ ನೇರವಾಗಿ ಮುಖ್ಯಮಂತ್ರಿಯವರಂ ಉತ್ತರ ಕೊಡಬೇಕು. ಇದರ ಬಗ್ಗೆ ಎಡಿಟೋರಿಯಲ್ ಕೂಡ ಬಂದಿದೆ. ಇದಂ ಹೆಲ್ತ್ ಡಿಪಾರ್ಟ್‌ಮೆಂಟ್‌ಗೆ ಹೇಗೆ ಬರುತ್ತದೆ.

ಶ್ರೀ ಬಿ ರಾಚಯ್ಯ.—ಈಗಾಗಲೇ ಉತ್ತರ ತಯಾರು ಮಾಡಿ ಕೊಡಲಾಗಿದೆ. ಜಸ್ಟೀಸ್ ಪುಟ್ಟಸ್ವಾಮಿಯವರನ್ನು ನೇಮಿಸುವಂಥ ವಿಚಾರ ನಮ್ಮ ಇಲಾಖೆಗೆ ಬಂದಿದ್ದು, ಅದನ್ನು ಕ್ಯಾಬಿನೆಟ್ ಮುಂದೆ ಇಟ್ಟು ನೇಮಕ ಮಾಡಲಾಗಿದೆ. ಅವರು ಕೊಟ್ಟಂತ ರಾಜೀನಾಮೆ ಕೂಡ ನನ್ನ ಇಲಾಖೆಗೆ ಬಂದಿದ್ದು, ಅದನ್ನೂ ಕೂಡ ಕ್ಯಾಬಿನೆಟ್ ಮುಂದಿಟ್ಟು ಒಪ್ಪಿಗೆ ಪಡೆಯಲಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಪ್ರಶ್ನೆ ಇರತಕ್ಕಂಥಾದ್ದು ಜಸ್ಟೀಸ್ ಪುಟ್ಟಸ್ವಾಮಿಯವರು ರಾಜೀನಾಮೆ ನೀಡಲು ಕಾರಣಗಳು ಏನು ಎಂದು. ಎಂ. ಡಿ. ಸೀಟಿನ ಗತಿ ಏನಾಯಿತು, ಅಲ್ಲಿ ನಡೆದಂಥ ಲಂಚಗಳ ಬಗ್ಗೆ ಪ್ರಶ್ನೆ ಇಲ್ಲ. ಏಕಸದಸ್ಯ ಆಯೋಗ ಏನಾಯಿತು. ಇದು ನಿಮ್ಮ ಖಾತೆಗೆ ಬರುವುದಕ್ಕೆ ಸಾಧ್ಯವೇ ಇಲ್ಲ ಇದು ಬಿ.ಎ.ಡಿ.ಗೆ ಸಂಬಂಧಪಟ್ಟಿದ್ದು. ಏಕಸದಸ್ಯ ಆಯೋಗದ ಬಗ್ಗೆ ಹೈಕೋರ್ಟ್ ಜೊತೆಯಲ್ಲಿ ವ್ಯವಹಾರ ಮಾಡುವಂತಾದ್ದು ಹೆಲ್ತ್ ಡಿಪಾರ್ಟ್‌ಮೆಂಟ್ ಅಲ್ಲ. ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಸಭೆಯ ಮುಂದಿಡಿ.

ಅಧ್ಯಕ್ಷರು —ಈಗ ಇದನ್ನು ಹೆಲ್ಡ್ ಓವರ್ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಹೆಲ್ಡ್ ಓವರ್ ಮಾಡುವುದಲ್ಲ.

ಅಧ್ಯಕ್ಷರು.—ಉತ್ತರ ಸಮರ್ಪಕವಾಗಿ ಇಲ್ಲದಿದ್ದರೆ ಏನು ಮಾಡುವುದು

ಶ್ರೀ ಎಸ್. ಬಂಗಾರಪ್ಪ.—ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. ನೀವು ಸ್ವಲ್ಪ ದಯಮಾಡಿ ಕೇಳಿ.

ಅಧ್ಯಕ್ಷರು.—ಹೆಲ್ಡ್ ಓವರ್ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಸಂಬಂಧಪಟ್ಟವರು ಇಲ್ಲಿ ಕೂತಿರಬೇಕಾದರೆ, ಹೆಲ್ಡ್ ಓವರ್ ಏತಕ್ಕೆ ಮಾಡಬೇಕು. It pertains to appointment of one of the sitting Judges of the High Court to head one man commission.

ಅಧ್ಯಕ್ಷರು. —ಉತ್ತರ ಹೇಳಿದ್ದಾರೆ, ಅದು ಸಮರ್ಪಕವಾಗಿಲ್ಲ ಅಂದರೆ...

ಶ್ರೀ ಎಸ್. ಬಂಗಾರಪ್ಪ.—ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ.

(ಗೊಂದಲ)

ಅಧ್ಯಕ್ಷರು.—ಹಾಗಾದರೆ ಇದನ್ನು ಹೆಲ್ಡ್ ಓವರ್ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಇದನ್ನು ಹೆಲ್ಡ್ ಓವರ್ ಮಾಡುವುದು ಬೇಡ. ಮುಖ್ಯ ಮಂತ್ರಿಗಳು ಇಲ್ಲಿಯೇ ಇದ್ದಾರೆ. ಆದ್ದರಿಂದ, ಈ ಪ್ರಶ್ನೆಯನ್ನು ತಡೆ ಹಿಡಿಯುವುದು ಬೇಡ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಸರ್ಕಾರದ ಅನೇಕ ಆಡಳಿತದ ಖಾತೆಗಳಂ ಏನಿವೆ ಆಯಾ ಖಾತೆಗೆ ಸಂಬಂಧಪಟ್ಟಂತಹ ವಿಚಾರ ಇದ್ದರೆ ಆಯಾ ಖಾತೆಯ ಮಂತ್ರಿಗಳು ಇಲ್ಲಿ ಉತ್ತರ ಕೊಡುವುದು ವಾಡಿಕೆ. ಇದು ಹೆಲ್ತ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟಿದ್ದು ಎಂದು ಹೆಲ್ತ್ ಮಿನಿಸ್ಟರ್ ಉತ್ತರ ಕೊಡುತ್ತಿದ್ದಾರೆ. ಈಗ ಎಲ್ಲಿಯಾದರೂ ಗೋಲಿಬಾರ್ ಆಯಿತಂ ಮತ್ತೊಂದು ಆಯಿತು ಅಂದರೆ ಅಂತಹ ಸಮಯದಲ್ಲಿ ಎನ್‌ಕ್ವಯಿರಿ ಕಮಿಷನ್ ಮಾಡುತ್ತೇವೆ. ಆ ಸಂದರ್ಭದಲ್ಲಿ ಗೃಹ ಖಾತೆ ಸಚಿವರು ಉತ್ತರವನ್ನು ಕೊಡುತ್ತಾರೆ. ಬೇರೆ ವಿಚಾರ ಶಾಲೆಗೆ ಸಂಬಂಧಪಟ್ಟಂತೆ ಅಥವಾ ಸ್ಕೂಲಿಗೆ ಸಂಬಂಧಪಟ್ಟಂತೆ ಇದ್ದರೆ ಎಜುಕೇಷನ್ ಮಿನಿಸ್ಟರ್ ಅವರು ಉತ್ತರ ಕೊಡುತ್ತಾರೆ. ಇದು

ಮೊದಲಿನಿಂದಲೂ ಬಂದಂಥ ಪದ್ಧತಿ. ಮಾನ್ಯ ಮಂತ್ರಿಗಳ ಉತ್ತರ ಸಮರ್ಪಕವಾಗಿ ಇಲ್ಲವೇ ಇದ್ದರೆ ಆಗ ಹೇಳಲಿ. ಈಗ ಹೆಲ್ತ್ ಡಿಪಾರ್ಟ್‌ಮೆಂಟಿನಿಂದ ಮೊದಲನೆಯ ಅಪಾಯಿಂಟ್‌ಮೆಂಟ್ ಆರ್ಡರ್ ಹೊರಟಿದೆ. ಈ ಆಯೋಗದ ಅಧ್ಯಕ್ಷರಾದ ಮಾನ್ಯ ಜಸ್ಟಿಸ್ ಪುಟ್ಟಸ್ವಾಮಿಯವರು ಯಾರು ಅಪಾಯಿಂಟ್‌ಮೆಂಟ್ ಮಾಡಿದ್ದಾರೆ ಆ ಖಾತೆಗೆ ರಾಜೀನಾಮೆಯನ್ನು ಕಳುಹಿಸಿದ್ದಾರೆ. ಹೊಸ ಆಯೋಗದ ಅಧ್ಯಕ್ಷರ ನೇಮಕಾತಿ ಆ ಖಾತೆಯಿಂದ ಆಗಿದೆ. ಅವರು ಉತ್ತರವನ್ನು ಕೊಡಕೂಡದು, ನಾನು ಉತ್ತರವನ್ನು ಕೊಡಬೇಕು ಎಂದು ಹೇಳುವುದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಎಂ. ಡಿ. ಸೀಟು ಗವರ್ನ್‌ಮೆಂಟ್ ಸೀಟು ಅಲ್ಲ. ಸರ್ಕಾರದಿಂದ ಅಂದರೆ ಹೆಲ್ತ್ ಡಿಪಾರ್ಟ್‌ಮೆಂಟ್‌ನಿಂದ ಸೀಟು ಕೊಡಿಸುತ್ತೇನೆಂದು ಹೇಳಿ ೨ ಲಕ್ಷ ರೂಪಾಯಿ ತೆಗೆದುಕೊಂಡಂ.....

(ಗೊಂದಲ)

ಅಧ್ಯಕ್ಷರು.— ತಾವು ಹೇಳುವಂಥಾದ್ದು ರಿಲೆವೆಂಟ್ ಇಲ್ಲ. ಇಲ್ಲಿ ಇರ್ರೆಲೆವೆಂಟ್ ಡಿಂಗ್ಸ್ ಹೇಳುವುದು ಬೇಡ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದು ಮಾನ್ಯ ಮುಖ್ಯ ಮಂತ್ರಿಯವರ ಡಿಪಾರ್ಟ್‌ಮೆಂಟಿಗೆ ಸೇರಿದ ಮೇಲೆ ಅವರು ನೇರವಾಗಿ ನಮಗೆ ಉತ್ತರವನ್ನು ಹೇಳಬೇಕು.

(ಗೊಂದಲ)

ಅಧ್ಯಕ್ಷರು — ಇದು ಅರ್ಧ ಗಂಟೆ ಕಾಲ ಚರ್ಚೆ ಅಲ್ಲ. ಇಲ್ಲಿ ಇರ್ರಿಲೆವೆಂಟ್ ಎಲ್ಲಾ ಹೇಳಬೇಡಿ. ನೀವು ನೇರವಾಗಿ ಸಪ್ಲಿಮೆಂಟರಿ ಕೇಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಜಸ್ಟಿಸ್ ಪುಟ್ಟಸ್ವಾಮಿಯವರ ಕಮಿಷನ್ ನೇಮಕ ಮಾಡಿದ್ದು ಮಾನ್ಯ ಮುಖ್ಯ ಮಂತ್ರಿಯವರು. ಆದ್ದರಿಂದ, ಅದು ಹೆಲ್ತ್ ಡಿಪಾರ್ಟ್‌ಮೆಂಟ್‌ಗೆ ಬರುವುದಿಲ್ಲ. ಇಂತಹ ವಿಚಾರಗಳ ಬಗ್ಗೆ ಅನೇಕಸಾರಿ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದರು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ನನಗೆ ಸಂಬಂಧವಿಲ್ಲ ಎಂದು ಹೇಳಿದ್ದಾರೆ, ಹೆಲ್ತ್ ಮಿನಿಸ್ಟರ್ ನನಗೆ ಸಂಬಂಧಪಟ್ಟಿದ್ದು ಎಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ತಾವು ನಿಷ್ಪಕ್ಷಪಾತವಾಗಿ ನೋಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ಈಗ ಕ್ವೊಶ್ಚನ್ ಹವರ್ ಎರಡು ತಾಸು ತಳ್ಳಬೇಕೆಂದು ಮಾಡುತ್ತೀರಾ ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ರೆಕ್ಟಿಫೈಡ್ ಸ್ಪಿರಿಟ್ ವಿಚಾರದಲ್ಲಿ ಯಾವ ಮಂತ್ರಿಗಳು ಉತ್ತರ ಕೊಟ್ಟರು, ತಾವೇ ಹೇಳಿ ವಿಕಸದಸ್ಯ ಆಯೋಗದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟರು. ಆದ್ದರಿಂದ, ನಾವು ಸ್ಪಷ್ಟವಾಗಿ ಕೇಳುತ್ತಿದ್ದೇನೆ, ಇದಕ್ಕೂ ಸಹ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕು. ತಾವು ಮುಖ್ಯ ಮಂತ್ರಿಗಳಿಗೆ ಉತ್ತರ ಕೊಡಲಿಕ್ಕೆ ತಿಳಿಸಬೇಕು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು. ತಮಗೆ ಬೇಕು ಅಂದರೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಎಂ ಮಲ್ಲಿಕಾರ್ಜುನ ಖಾರ್ಗೆ.—ಈ ಪ್ರಶ್ನೆಯನ್ನು ಹೆಲ್ತ್ ಡಿಪಾರ್ಟ್‌ಮೆಂಟಿಗೆ ಏತಕ್ಕೆ ಚೇಂಜ್ ಮಾಡಿದಿರಿ.

(ಗೊಂದಲ)

ಅಧ್ಯಕ್ಷರು.—ಈ ಕ್ವೊಶ್ಚನ್ ಬೇಕಾದರೆ ಮುಂದೆ ಹಾಕುತ್ತೇನೆ.....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವು ಸರ್ಕಾರವನ್ನು ಷೀಲ್ಡ್ ಮಾಡುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರು ಬಾಯಿಗೆ ಬಂದಹಾಗೆ ಮಾತನಾಡುವುದು ಸರಿಯಲ್ಲ ತಮಗೆ ಸರಿಯಾಗಿ ಉತ್ತರಬೇಕು ಅಂದರೆ ನಾನು ಮುಂದೆ ಹಾಕುತ್ತೇನೆ. ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು.—ನಾನು ಇದನ್ನು ಎಕ್ಸಾಮಿನ್ ಮಾಡುತ್ತೇನೆ.

Sri S. Bangarappa.—It pertains to Chief Minister. He is here. He is bound to answer. We are not questioning. ನಾವು ಬೇರೆ ಏನನ್ನೂ ಕ್ವೊಶ್ಚನ್ ಮಾಡಿಲ್ಲ ? ಆಥವಾ ಸೀಟಿನ ಗತಿ ಏನಾಯಿತು ಎಂತಲೂ ಕೂಡ ನಾವು ಕ್ವೊಶ್ಚನ್ ಮಾಡಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾವು ಪ್ರಶ್ನೆ ಕೇಳಿರತಕ್ಕದ್ದು ಮಾನ್ಯ ಮುಖ್ಯ ಮಂತ್ರಿಗಳಿಗೆ. ಅದು ಸ್ಪಷ್ಟವಾಗಿ ಈ ಕ್ವೊಶ್ಚನ್ ಲಿಸ್ಟ್‌ನಲ್ಲಿ ಪ್ರಿಂಟ್ ಆಗಿದೆ.

ಅಧ್ಯಕ್ಷರು.—ಹೆಲ್ತ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಿಸಿದ್ದು ಎಂದು ಅವರು ಹೇಳಿದ್ದಾರೆ.....

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹಾಗಾದರೆ ಅವರು ಎಂದು ಹೇಳಿದರು ನಾವು ಅದನ್ನು ಕೇಳಬೇಕೆ ?

(ಗೊಂದಲ)

ಅಧ್ಯಕ್ಷರು.—ಇದಕ್ಕೆ ಯಾರು ಉತ್ತರವನ್ನು ಕೊಡಬೇಕೆಂಬುದನ್ನು ನಾನು ಎಕ್ಸಾಮಿನ್ ಮಾಡುತ್ತೇನೆ. ನಾನೇ ಸ್ವತಃ ಎಕ್ಸಾಮಿನ್ ಮಾಡಿ ನಿಮಗೆ ಉತ್ತರವನ್ನು ಕೊಡಿಸುತ್ತೇನೆ.....

(ಗೊಂದಲ)

Sri S. Bangarappa.—When the Hon'ble Chief Minister is very much present in the House.....

ಅಧ್ಯಕ್ಷರು.—ಈಗ ಏನು ಆರೋಗ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ, ಅದು ಸಮರ್ಪಕವಾಗಲಿಲ್ಲ ಎಂದರೆ ನಾನು ನಾಳೆ ಇದನ್ನು ನೋಡಿ ಯಾರು ಉತ್ತರವನ್ನು ಕೊಡಬೇಕೆಂದು ಎಕ್ಸಾಮಿನ್ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾಡಬಾರದ್ದನ್ನು ಮಾಡಿ ಇಲ್ಲಿ ಬಂದು ಉತ್ತರ ಕೊಟ್ಟರೆ.....

(ಗೊಂದಲ)

ಅಧ್ಯಕ್ಷರು.—ನಿಮಗೆ ಸಮರ್ಪಕವಾದ ಉತ್ತರ ಬಂದಿಲ್ಲ ಎಂದು ತಿಳಿದುಕೊಂಡು ಈ ಕ್ವೆಶ್ಚನ್‌ನ್ನು ಮುಂದಕ್ಕೆ ಹಾಕಿದ್ದೇನೆ.

(ಗೊಂದಲ)

MR. SPEAKER.—Nothing will go on record.....

SRI M. MALLIKARJUNA KHARGE.—I am very sorry.....

ಅಧ್ಯಕ್ಷರು.—ನಿಮಗೆ ತೃಪ್ತಿಕರವಾದ ಉತ್ತರ ಬಂದಿಲ್ಲ ಎಂಬುದನ್ನು ನಾನು ಗಣನೆಗೆ ತೆಗೆದು ಕೊಂಡು ನಿಮಗೆ ಯಾರಿಂದ ಉತ್ತರವನ್ನು ಕೊಡಿಸಬೇಕೆಂಬುದನ್ನು ಎಕ್ಸ್‌ಪಿನ್ ಮಾಡಿ ಮುಖ್ಯ ಮಂತ್ರಿಗಳಿಂದ ಉತ್ತರ ಕೊಡಿಸಬೇಕೆಂದು ಕಂಡುಬಂದರೆ ಅವರಿಂದಲೇ ಉತ್ತರ ಕೊಡಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಪ್ರಶ್ನೆಯನ್ನು ನಾವು ಹಾಕಬೇಕಾದರೆ ಮುಖ್ಯಮಂತ್ರಿಗಳ ಖಾತೆಗೆ ಸಂಬಂಧಪಟ್ಟಿಂತೆಯೇ ಹಾಕಿದ್ದೇವೆ. ಇಲ್ಲಿ ಏನು ಪ್ರಶ್ನೆ ಪ್ರಿಂಟ್ ಆಗಿದೆ ಇದು ಸಂಪೂರ್ಣವಾಗಿ ಸರಿಯಾಗಿದೆ .....

(ಗೊಂದಲ)

ಅಧ್ಯಕ್ಷರು.—ನಿಮಗೆ ಈ ಉತ್ತರ ಸಮಾಧಾನವಾಗಿಲ್ಲ ಎಂದು ತಿಳಿದುಕೊಂಡು ನಾನು ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಿದ್ದೇನೆ.....

(ಗೊಂದಲ)

MR. SPEAKER.—Nothing will go on record.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾಗೆ ಇದನ್ನು ಮುಂದಕ್ಕೆ ಹಾಕುವುದಕ್ಕಾಗುವುದಿಲ್ಲ ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಹೌಸ್‌ನಲ್ಲಿ ಪ್ರೆಸೆಂಟ್ ಇದ್ದಾರೆ.....

ಅಧ್ಯಕ್ಷರು.—ನಾನು ಈ ಕ್ವೆಶ್ಚನ್‌ನ್ನು ಮುಂದಕ್ಕೆ ಹಾಕಿದ್ದೇನೆಂದು ಹೇಳಿದ್ದೇನೆ. ಮುಂದಕ್ಕೆ ಹಾಕಬೇಕಾದರೂ ಕೂಡ ಕೆಲವು ಕಾರಣಗಳಿವೆ. ನಿಮಗೆ ಸಮರ್ಪಕವಾದ ಉತ್ತರ ಸಿಕ್ಕಿಲ್ಲ.....

(ಗೊಂದಲ)

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರ ಸಿಕ್ಕಿಲ್ಲ ಎಂದು ನೀವು ಹೇಳಿದ್ದೀರಿ. ಸಮರ್ಪಕವಾದ ಉತ್ತರ ಸಿಕ್ಕಿಲ್ಲ ಎನ್ನುವ ದೃಷ್ಟಿಯಿಂದ ನಾನು ಇದನ್ನು ಮುಂದಕ್ಕೆ ಹಾಕಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರು ಈಗಾಗಲೇ ರೂಲಿಂಗ್‌ನ್ನು ಕೊಟ್ಟಿದ್ದಾರೆ. ಅದನ್ನು ನೀವು ಕ್ವೆಶ್ಚನ್ ಮಾಡಬಾರದು.....

ಶ್ರೀ ಎಸ್. ಬಂಗಾರಪ್ಪ.—ನಾವು ಅಧ್ಯಕ್ಷರನ್ನು ಕ್ವೆಶ್ಚನ್ ಮಾಡುತ್ತಿಲ್ಲ ಆದರೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ ಅವರು ಉತ್ತರವನ್ನು ಕೊಡುವುದಕ್ಕೆ ಇವೇಡ್ ಮಾಡುತ್ತಿದ್ದಾರೆ. Government is evading to answer this question.....

(ಗೊಂದಲ)

MR. SPEAKER.—Nothing will go on record. I have postponed this question.....

(ಗೊಂದಲ)

ಅಧ್ಯಕ್ಷರು.—ಈ ಪ್ರಶ್ನೆಯ ಬಗ್ಗೆ ಯಾರು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. Nothing will be recorded.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಕಂಠವನ್ನು ಏರಿಸುವುದರಿಂದ ಏನೂ ಪ್ರಯೋಜನವಾಗುವುದಿಲ್ಲ.

(ಗೊಂದಲ)

MR. SPEAKER.—Nothing will be recorded * ನಾನು ಈ ಕ್ವೆಶ್ಚನ್‌ನ್ನು ಮುಂದಕ್ಕೆ ಹಾಕಿದ್ದೇನೆ.

(ಗೊಂದಲ)

ಶ್ರೀ ಎ.ಲಕ್ಷ್ಮೀಸಾಗರ್.—ಯಾರು ಅವಾಯಿಡ್ ಮಾಡಿದವರು ಅಧ್ಯಕ್ಷರ ವಿರುದ್ಧವಾಗಿ ಯಾರಾ ಏನು ಮಾತನಾಡಬಾರದು.

ಅಧ್ಯಕ್ಷರು.—ಮಾನ್ಯ ಖಾರ್ಗೆಯವರೇ ನಿಮ್ಮ ಹಿತದೃಷ್ಟಿಯಿಂದ, ನಿಮಗೆ ಸಮರ್ಪಕವಾದ ಉತ್ತರ ಕೊಡಿಸಬೇಕೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈಗ ಈ ಪ್ರಶ್ನೆಗೆ ಯಾರಾ ಉತ್ತರವನ್ನು ಕೊಡಬೇಕು ಎನ್ನುವುದಕ್ಕೆ ಇಷ್ಟು ವಾದವಿವಾದವಾಗಬೇಕೆ ? ಇದಕ್ಕೆ ಯಾರು ಜವಾಬ್ದಾರರಿರುತ್ತಾರೆ ಅವರಿಂದ ಇದನ್ನು ಅವಾಯ್ಡ್ ಮಾಡುತ್ತಿಲ್ಲ. ಸರ್ಕಾರದ ಮುಂದೆ ಈ ವಿಚಾರ ಬಂದಾಗ ನವ್ಯ ನಿಲುವಿನ ಪ್ರಕಾರವಾಗಿ ನಾವು ಕವಿಷನ್‌ನ್ನು ಅಪಾಯಿಂಟ್ ಮಾಡಿದ್ದೇವೆ. ಈಗ ಯಾರು ಉತ್ತರವನ್ನು ಕೊಡಬೇಕು ಎನ್ನುವ ಬಗ್ಗೆ ಕಡತವನ್ನು ನಿಮಗೆ ಕಳುಹಿಸಿಕೊಡುತ್ತೇವೆ, ನೀವು ಅದನ್ನು ನೋಡಿ ಸಂಬಂಧಪಟ್ಟ ಆಡಳಿತ ಇಲಾಖೆಯವರು ಉತ್ತರ ಕೊಡಬೇಕು ಎನ್ನುವ ತೀರ್ಮಾನವಾದರೆ ಅವರ ಉತ್ತರ ಕೊಡಲಿ, ಇಲ್ಲ ನಾನು ಕೊಡಬೇಕೆಂದು ತೀರ್ಮಾನವಾದರೆ ನಾನು ಉತ್ತರ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಏತಕ್ಕೆ ?

ಶ್ರೀ ರಾಮಕೃಷ್ಣ ಹೆಗಡೆ.—ಏತಕ್ಕೆಂದರೆ ಅದನ್ನು ನೋಡಬೇಕು ನೀವು ಹೇಳಿದಂತೆ ಕಣಿಯುವುದಕ್ಕೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಯಾವುದನ್ನೂ ರೆಕಾರ್ಡ್ ಮಾಡಬಾರದು.

(ಗೊಂದಲ)

ಅಧ್ಯಕ್ಷರು.—ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಮಾನ್ಯ ರಾಚಯ್ಯನವರು ಹೇಳಿದ್ದಾರೆ, ನಾನೂ ಕೂಡ ಹೇಳಿದ್ದೇನೆ. ಅದನ್ನು ಎಕ್ಸಾಮಿನ್ ಮಾಡಿ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕಾದರೆ ಅವರಿಂದ ಉತ್ತರ ಕೊಡಿಸುತ್ತೇನೆ ಮಾನ್ಯ ರಾಚಯ್ಯನವರು ಉತ್ತರ ಕೊಡಬೇಕೆಂದರೆ ಅವರಿಂದ ಕೊಡಿಸುತ್ತೇನೆ. ಈಗ ತಾವು ಹೇಳಿದ ಪ್ರಕಾರ, ತಮಗೆ ಸಮರ್ಪಕವಾದ ಉತ್ತರ ಸಿಕ್ಕಿಲ್ಲ ಎನ್ನುವ ನಿಮ್ಮ ಅಭಿಪ್ರಾಯದ ಪ್ರಕಾರ ಸಂಬಂಧ ಪಟ್ಟ ಮಂತ್ರಿಗಳಿಂದ ಉತ್ತರ ತರಿಸಿ ಕೊಡುತ್ತೇನೆ. ಈಗ ತಾವು ಆರೋಗ್ಯ ಮಂತ್ರಿಗಳಿಂದ ಸಮರ್ಪಕವಾದ ಉತ್ತರ ಬಂದಿಲ್ಲವೆಂದು ಹೇಳಿದಿರಿ ತಾವು ಹೇಳಿದ ಮೇಲೆ ಅದನ್ನು ಎಕ್ಸಾಮಿನ್ ಮಾಡಿ, ಅಧಿಕೃತ ರೆಕಾರ್ಡ್‌ನ್ನು ತರಿಸಿಕೊಂಡು ಎಕ್ಸಾಮಿನ್‌ಮಾಡಿ ಉತ್ತರ ತರಿಸಿ ಕೊಡುತ್ತೇನೆ. ಆದ್ದರಿಂದ ಈಗ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಿದ್ದೇನೆಂದು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಾಗಲೇ ಎಕ್ಸಾಮಿನ್ ಮಾಡಿ ಮಾನ್ಯ ಮುಖ್ಯಮಂತ್ರಿಗಳ ಹೆಸರಿನಲ್ಲಿ ಪ್ರಿಂಟ್ ಆಗಿದೆ. ಇಲ್ಲಿ ಆ ವಿಚಾರವನ್ನು ಹೇಳುತ್ತಿದ್ದೇನೆ ಉತ್ತರ ಹೇಳತಕ್ಕಂಥ ದ್ದಲ್ಲ.

ಅಧ್ಯಕ್ಷರು.—ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ಇನ್ನೂ ಮೂರು ದಿವಸಗಳು ಅಸೆಂಬ್ಲಿ ನಡೆಯುತ್ತದೆ. ಆಮೇಲೆ ತೆಗೆದುಕೊಳ್ಳಲು ನಾನು ಈ ಪ್ರಶ್ನೆಯನ್ನು ಪೋಸ್ಟ್‌ಪೋನ್ ಮಾಡಿದ್ದೇನೆ.

(ಗೊಂದಲ)

ಅಧ್ಯಕ್ಷರು.—ನಾನು ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಿದ್ದೇನೆ ಮತ್ತು ಎಕ್ಸಾಮಿನ್ ಮಾಡುತ್ತೇನೆಂದು ಹೇಳಿದ್ದೇನೆ. ನಿಮಗೆ ಸಮಾಧಾನವಾಗುವಂತೆ ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರ

---

* Not recorded as orded by the chair

ಕೊಡಿಸಲಿಕ್ಕೆ ಅದನ್ನು ಎಕ್ಸಾಮಿನ್ ಮಾಡುವ ಸಲುವಾಗಿ ಮುಂದಕ್ಕೆ ಹಾಕಿದ್ದೇನೆ. ಈಗ ಚರ್ಚೆ ಬೇಡ ಈಗಾಗಲೇ ನಾನು ರೂಲಿಂಗ್ ಕೊಟ್ಟಿದ್ದೇನೆ ಸಂಬಂಧಪಟ್ಟ ಮಂತ್ರಿಗಳಿಗೆ ಎಕ್ಸಾಮಿನ್ ಮಾಡಿ ಕಳುಹಿಸಿಕೊಡುತ್ತೇನೆಂದು ಹೇಳಿದ್ದೇನೆ. ಒಂದು ವೇಳೆ ಮುಖ್ಯಮಂತ್ರಿಗಳಿಂದಲೇ ಉತ್ತರ ಬರಬೇಕೆನ್ನುವುದಾದರೆ ಅವರಿಂದಲೇ ಉತ್ತರ ಕೊಡಿಸುತ್ತೇನೆ.

೧೧–೦೦ ಎ. ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ನಾವು ಅವರಿಂದ ಉತ್ತರ ಬಯಸಿಲ್ಲ.

ಅಧ್ಯಕ್ಷರು.—ಆದಕ್ಕೋಸ್ಕರವೇ ಮುಂದೆ ಹಾಕಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ. ಪ್ರಶ್ನೆಯನ್ನು ಮುಂದಕ್ಕೆ ಹಾಕಿದ್ದೇನೆ. ಮತ್ತು ಎಕ್ಸಾಮಿನ್ ಮಾಡುತ್ತೇನೆಂದು ಹೇಳಿದ್ದೇನೆ. ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕೆಂದರೆ ಅವರಿಂದಲೇ ಉತ್ತರ ಕೊಡಿಸುತ್ತೇನೆ.

SRI A. LAKSHMI SAGAR.—Sir

SRI M. MALLIKARJUNA KHARGE.—You direct him to reply.

MR. SPEAKER.—Nothing will go on record.

SRI M. MALLIKHARJUNA KHARGE.—It is very unbortunate.

SRI A. LAKSHMISAGAR.—It is unbecoming to question your ruling.

SRI S. BANGARAPPA.—we are not questioning the authority of the Speaker.

SRI A. LAKSHMISAGAR-It is a matter of regret. I am sorry.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದು ಇದು ಏಂದು ಹೇಳುವುದು ಬೇಡ. ಇದರವಿಚಾರ ಜಗಜ್ಜಾಹಿರವಾಗಿ ಪತ್ರಿಕೆಗಳಲ್ಲಿ ಬಂದಿದೆ. ಕಡತ ಇಟ್ಟುಕೊಂಡು ಕಾಯತಿದ್ದಾರೆ. ಮುಖ್ಯ ಮಂತ್ರಿಗಳಿಗೆ ಪ್ರಶ್ನೆ ಹಾಕಿದ್ದೇವೆ. ಉತ್ತರ ಬಂದಿದೆ. ಅದನ್ನು ಹೇಳುವುದಕ್ಕೆ ಏಕೆ ನಾಚಿಕೆ ? ಎಲ್ಲವನ್ನು ಹೇಳುತ್ತಾರೆ ಇವಕ್ಕೆ ಏಕೆ ಹೀಗೆ ?

MR. SPEAKER.—Now I have differred the question

Interrupion

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಉತ್ತರ ಬರುವುದಕ್ಕೆ ಮುಂಚೆ ತಾವು ಆ ಮಾತನ್ನು ಹೇಳಿದ್ದರೆ ಸರಿ.

ಶ್ರೀ ರಾಮಕೃಷ್ಣ ಹೆಗಡೆ.—ವಿರೋಧ ಪಕ್ಷದ ನಾಯಕಿಯವರು ಈಗತಾನೆ ಬಂದಿದ್ದಾರೆ. ಇಲ್ಲಿ ಏನಾಯಿತಂ ಎನ್ನುವುದು ಅವರಿಗೆ ಗೊತ್ತಿಲ್ಲ. ಈ ಕಡತವನ್ನು ತಾವು ನೋಡಬೇಕು. ಈ ಪ್ರಶ್ನೆಗೆ ಎಲ್ಲಿ ಯಾವ ಇಲಾಖೆಯಲ್ಲಿ ಉತ್ತರ ತಯಾರಾಗಿದೆ ಎಂದು ನೋಡಿ ಮುಖ್ಯ ಮಂತ್ರಿಗಳ ಕಾರ್ಯಾಲಯದಲ್ಲಿ ತಯಾರಾಗಿದ್ದರೆ ನಾನು ಉತ್ತರಿಸುವುದು ನ್ಯಾಯ ಇದು ಆರೋಗ್ಯ ಖಾತೆಗೆ ಹೋಗಬೇಕಾದ ಪ್ರಶ್ನೆಯಾದ್ದರಿಂದ ಅಲ್ಲಿಗೆ ಹೋಗಿದೆ. ಅವರು ಉತ್ತರ ತಯಾರಿಸಿದ್ದಾರೆ. ನಿನ್ನೆ ತಮಗೆ ಕೂಡ ಒಂದು ಪತ್ರವನ್ನು ಬರೆದಿದ್ದೇನೆ.

' ಈ ಕೆಳಕಂಡ ಪ್ರಶ್ನೆಯನ್ನು ನಿಮ್ಮ ಕಾರ್ಯಾಲಯ ತಪ್ಪಾಗಿ ನನ್ನ ಹೆಸರಿಗೆ ಸೂಚಿಸಿ ದಿಳಿ-೬-೦೮ರ ಕಾರ್ಯ ಕ್ರಮದಲ್ಲಿ ಸೇರಿಸಿದೆ. ಈ ಪ್ರಶ್ನೆಯನ್ನು ಸಂಬಂಧಪಟ್ಟ ಸಚಿವರು ಉತ್ತರಿಸಬೇಕಾಗಿದೆ. ಆದ್ದರಿಂದ ದಯವಿಟ್ಟು ಈ ಪ್ರಶ್ನೆಯನ್ನು ಅವರ ಪಟ್ಟಿಗೆ ಸೇರಿಸ ಬೇಕೆಂದು ಕೋರಿಕ್ಕೊಳ್ಳುತ್ತೇನೆ '

ಎಂದು ನಿನ್ನೆ ನಿಮಗೆ ಪತ್ರ ಬರೆದಿದ್ದೇನೆ. ಉತ್ತರ ತಯಾರಿಸತಕ್ಕವರು ಸಂಬಂಧಪಟ್ಟ ಆರೋಗ್ಯ ಖಾತೆಯವರು ಆ ಖಾತೆಯವರು ತಯಾರಿಸಿದ ಉತ್ತರವನ್ನು ನಾನು ಹೇಗೆ ಕೊಡಲಿಕ್ಕೆ ಬರುತ್ತದೆ? ಯಾವ ಯಾವ ಖಾತೆಗೆ ಬೇಕಾದರೂ ಉತ್ತರಿಸಬಹುದು, ಅದು ಬೇರೆ ಈಗ ಸಂಬಂಧಪಟ್ಟ ಮಂತ್ರಿಗಳು ಯಾವ ಖಾತೆಯಲ್ಲಿ ಉತ್ತರ ತಯಾರಿಸಿದ್ದಾರೆ ಅವರು ಇದ್ದಾಗ, ಅವರು ಉತ್ತರ ಕೊಡಲಿಕ್ಕೆ ಮಂದಾದಾಗ ಇಂಥ ಆತುರ ಮಾಡತಕ್ಕದ್ದು ಸರಿಯಲ್ಲ, ತಾವು ಯೋಚಿಸಿ. ನಾನೇ ಉತ್ತರ ಕ್ಕೊಡ ಬೇಕೆಂದರೆ ನಾಳೆ ಅಥವಾ ನಾಡಿದ್ದು ಯಾವಾಗ ಹೇಳುತ್ತಾರೋ ಆಗ ಉತ್ತರ ಕೊಡುತ್ತೇನೆ. ಇದರಲ್ಲಿ ನಡಣುಚಿಕೊಳ್ಳುವ ಅಥವಾ ನಾಚಿಕೆ ಪಟ್ಟುಕೊಳ್ಳುವುದಾದರೂ ಏನಿದೆ ?

(ಗೊಂದಲ)

ಅಧ್ಯಕ್ಷರು.—ನಾನು ಅದನ್ನು ಎಕ್ಸ್‌ಪಿನ್ ಮಾಡುತ್ತೇನೆ, ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಅದರಲ್ಲಿ ಹೆಮ್ಮೆಪಟ್ಟು ಕೊಳ್ಳತಕ್ಕದ್ದು ಇದೆ.

(ಗೊಂದಲ)

ಅಧ್ಯಕ್ಷರು.—ನಿಮಗೆ ಸಮಾಧಾನ ಇಲ್ಲವೆಂದು ಮುಂದಕ್ಕೆ ಹಾಕಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಆಮಾಯ್ ಮಾಡಿಕೊಂಡು ಎಲ್ಲಿಗೆ ಹೋಗಬೇಕು ? ಇದೇನು ಬೋಫರ್ಸ್ ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವಾಗ ನೋಡಿದರೂ ಬೋಫರ್ಸ್... ...

(ಗೊಂದಲ)

ಅಧ್ಯಕ್ಷರು.—ಒಂದು ಕೆಲಸ ಮಾಡಿ. ನಾನು ಉತ್ತರ ಕೊಡಬೇಕೆಂದು ಡಿಸಿಷನ್ ಕೊಟ್ಟಿರೆ, ಉತ್ತರ ಕೊಡುತ್ತೇನೆ ಅದಕ್ಕೇನೂ ಆಭ್ಯಂತರ ಇಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಈ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿದ್ದೇನೆ. ಅದನ್ನು ಎಕ್ಸ್‌ಪಿನ್ ಮಾಡಿ ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ವಿತ್‌ಹೋಲ್ಡ್ ಮಾಡುವ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ.

ಅಧ್ಯಕ್ಷರು.—ನಾನಂ ಈಗಾಗಲೇ ಇದನ್ನು ಮುಂಕ್ತಾಯ ಮಾಡಿದ್ದೇನೆ, ಮತ್ತು ಮುಂದೆ ಹಾಕಿದ್ದೇನೆ. ಆದ್ದರಿಂದ ಅದರ ಮೇಲೆ ಚರ್ಚೆ ಬೇಡ. ಈಗಾಗಲೇ ಅದರ ಮೇಲೆ ರೂಲಿಂಗ್ ಕೂಡ ಕೊಟ್ಟಿದ್ದೇನೆ. ಈ ಪ್ರಶ್ನೆಯನ್ನು ಮುಂದೆ ಹಾಕಿದ್ದೇನೆ ಮತ್ತು ಎಕ್ಸ್‌ಪಿನ್ ಮಾಡುತ್ತೇನೆಂದು ಹೇಳಿದ್ದೇನೆ. ಈ ಪ್ರಶ್ನೆಗೆ ಮುಂಖ್ಯ ಮಂತ್ರಿಗಳಂ ಉತ್ತರ ಕೊಡಬೇಕೇ ಅಥವಾ ಯಾರು ಉತ್ತರ ಕೊಡಬೇಕೆಂಬುದನ್ನು ವಿಚಾರ ಮಾಡುತ್ತೇನೆಂದು ಹೇಳಿರುವುದರಿಂದ ಈಗ ಅದರ ಮೇಲೆ ಚರ್ಚೆ ಮಾಡುವುದು ಬೇಡ. I have already given my ruling.

SRI M. VEERAPPA MOILY.—Discussion not on your ruling. We will not discuss on your ruling, Sir.

ಅಧ್ಯಕ್ಷರು.—ನಿಮಗೇ ಅನುಕೂಲ ಇದೆ ರೂಲಿಂಗ್,

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಮಾಡುವುದೆಲ್ಲಾ ನಮಗೆ ಅನುಕೂಲವೆ.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಹೇಳಿದ್ದರಿಂದ ನಾನು ಎಗ್ಸಾಮಿನ್ ಮಾಡುತ್ತೇನೆ ಎಂದು ಹೇಳಿದ್ದೇನೆ. ಸಂಬಂಧಪಟ್ಟ ಮಂತ್ರಿಗಳಿಂದ ಸಮರ್ಪಕವಾದ ಉತ್ತರ ಬಂದಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ we can take it on some other day. I will examine, I have postponed,

ಶ್ರೀ ಎಂ. ವೀರಪ್ಪಮೊಯಿಲಿ —ಅದನ್ನು ನಾನು ಪ್ರಶ್ನೆ ಮಾಡುತ್ತಿಲ್ಲ.

ಅಧ್ಯಕ್ಷರು.—ದಯವಿಟ್ಟು ಕೂಡ್ರಿ. ಆ ಮ್ಯಾಟರ್ ಕ್ಲೋಸ್ ಆಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ನ್ಯಾಯಾಂಗ ವಿಚಾರಣೆಗೆ ಸಂಬಂಧಪಟ್ಟ.....

MR. SPEAKER.—Nothing will go on record.

* * *

ಅಧ್ಯಕ್ಷರು.—ಈಗ ನೆಕ್ಸ್ಟ್ ಕೊಶ್ಚನ್.....

(ಶ್ರೀ ಮೊಯಿಲಿಯವರು ಮಾತನಾಡುತ್ತಿದ್ದರು, ದಾಖಲಿಸಲಿಲ್ಲ.)

ಅಧ್ಯಕ್ಷರು.—ಅದೆಲ್ಲಾ ಮುಗಿದಿದೆ. ದಯವಿಟ್ಟು ಕೂಡ್ರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಬೇರೆ ಕಾರಣದಿಂದ ವಿತೆಲ್ಡ್ ಮಾಡಿ. ಆದರೆ ನ್ಯಾಯಾಂಗ ವಿಚಾರಣೆ.....

ಅಧ್ಯಕ್ಷರು.—ಅದು ಪೋಸ್ಟ್ ಪೋನ್ ಆಗಿದೆ,

ಶ್ರೀ ಎಂ. ವೀರಪ್ಪಮೊಯಿಲ್ಲಿ.—ನ್ಯಾಯಾಂಗ ವಿಚಾರಣೆಗೆ ಸಂಬಂಧಪಟ್ಟ ಪ್ರಶ್ನೆಗಳು ಇನ್ನು ಮುಂದೆ ಹೆಲ್ತ್ ಮಿನಿಸ್ಟರ್‌ಗೆ ಹೋಗುತ್ತವೆ ಎಂದು ಹೇಳಲಿ.

ಅಧ್ಯಕ್ಷರು.—ಮುಖ್ಯ ಮಂತ್ರಿಗಳೇ ಉತ್ತರ ಕೊಡಬೇಕೆಂದು ಹೇಳಿದರು. ಅವರು ಉತ್ತರ ಕೊಡಬೇಕಾದರೆ ಅವರ ಪ್ರಶ್ನೆ ಇದ್ದಾಗ ಕೊಡುತ್ತಾರೆ. ಬೇಕಾದರೆ ಹಾಫ್-ಅನ್ ಅವರ್ ಡಿಸ್ಕಷನ್‌ಗೆ ಹಾಕುವಿರಂತೆ ವೀರಪ್ಪನವರೇ ದಯವಿಟ್ಟು ಕೂಡ್ರಿ. ನಾನು ರೂಲಿಂಗ್ ಕೊಟ್ಟಾಗಿದೆ. ಈಗ ದಯವಿಟ್ಟು ಚರ್ಚೆ ಬೇಡ. ಆ ಪ್ರಶ್ನೆಯನ್ನು ಮುಂದಕ್ಕೆ ಹಾಕಿದ್ದೇನೆ,

SRI M. VEERAPPA MOILY.—It pertains to the portfolio of the Chief Minister. Whether the Govern r has changed the Chief Minister with reference to the Judicial commission ?

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ ಹೇಳುತ್ತೇನೆ. ರೂಲಿಂಗ್ ಕೊಟ್ಟಾಗಿದೆ. ನೋಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪೋರ್ಟ್‌ಫೋಲಿಯೊ ಬದಲಾವಣೆಯಾಗಿರುವ ಬಗ್ಗೆ ರೂಲಿಂಗ್ ಕೊಟ್ಟಿದ್ದೀರಾ ?

ಅಧ್ಯಕ್ಷರು.—ಕೊಶ್ಚನ್ ಮುಂದೆ ಹಾಕಿದ್ದೇನೆ.

ಶ್ರೀ ವಿ. ಲಕ್ಷ್ಮೀಸಾಗರ್.—ಅವರಿಗೆ ಸಭೆ ನಡೆಸುವುದಕ್ಕೆ ಇಷ್ಟವಿಲ್ಲ. ಕಾಲು ಕೆರೆದುಕೊಂಡು ಜಗಳಕ್ಕೆ ಬಂದಹಾಗೆ ಕಾಣುತ್ತದೆ.

(ಆ ಸಂದರ್ಭದಲ್ಲಿ ಹಲವಾರು ಸದಸ್ಯರು ಎದ್ದು ಒಟ್ಟಿಗೆ ಮಾತನಾಡತೊಡಗಿದರು.)

ಅಧ್ಯಕ್ಷರು.—ನೀವು ಈ ತರಹ ಸಭೆ ನಡೆಯುವುದಕ್ಕೆ ..

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ತಾವು ಹೇಳಿದಿರಿ ನಾನು ನೋಡಿಬಿಟ್ಟು ಹೇಳುತ್ತೇನೆ ಎಂದು.

ಅಧ್ಯಕ್ಷರು.—ಈಗ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ತಾಳಿ ಬಂದು ನಿಮಿಷ. ದಯವಾಡಿ ಕೇಳಿ.

(ಗೊಂದಲ)

---

* * * Not recorded as ordered by the chair.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅಧ್ಯಕ್ಷರೆ, ನನ್ನ ಉತ್ತರ ಹೀಗಿದೆ,

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ತಾವು ತಿಳಿದುಕೊಳ್ಳಬೇಕು. ಇನ್ನೂ ಮೂರು ನಾಲ್ಕು ದಿವಸ ಅಸೆಂಬ್ಲಿ ಇದೆ.

ಅಧ್ಯಕ್ಷರು.—ನೀವು ಸೀನಿಯರ್ ವೋಸ್ಟ್ ಮೆಂಬರ್. ರೂಲಿಂಗ್ ನೋಡಿ. ಈಗ ದೊಡ್ಡ ಮೇಟಿಯವರು...

ಶ್ರೀ ಎಸ್. ಬಂಗಾರಪ್ಪ.—ಅಸೆಂಬ್ಲಿ ಮುಂಕ್ತಾಯವಾಗುತ್ತದೆ.

ಅಧ್ಯಕ್ಷರು.—ನಾನು ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ತಾವು ರೂಲಿಂಗ್ ಕೊಟ್ಟಿದ್ದೀರಿ. ಯಾವಾಗ ಹೇಳೋದು ? ನಾನೆ ನೋಡುತ್ತೇನೆ ಎಂದು ಕುಳಿತರು ಕೊಂಡುಬಿಟ್ಟಿರಿ. ಅಸೆಂಬ್ಲಿ ಮುಂಗಿದರೆ...

(ಗೊಂದಲ)

MR. SPEAKER.—In the best interest of all the members, I have postponed this question.

ಶ್ರೀ ಎಸ್. ಬಂಗಾರಪ್ಪ,—ಯಾವಾಗ ಬರುತ್ತದೆ ?

ಅಧ್ಯಕ್ಷರು.—ನೋಡೋಣ, ನಾಳೆಯೋ ನಾಡಿದ್ದೋ ಹಾಕೋಣ. ಅವರೂ ಕೂಡ ನನ್ನ ಅಭ್ಯಂತರ ಇಲ್ಲ, ನಾಳೆಯಾದರೂ ಹಾಕಿ, ನಾಡಿದ್ದಾದರೂ ಹಾಕಿ ಎಂದು ಹೇಳಿದ್ದಾರೆ. I will examine it in my office

ಶ್ರೀ ಎಸ್. ಬಂಗಾರಪ್ಪ.—ಅಷ್ಟರಲ್ಲಿ ಅಸೆಂಬ್ಲಿಯೇ ಮುಂಗಿದು ಹೋಗುತ್ತದೆಯೆಲ್ಲ, ಆಗ ಏನು ಮಾಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಶನಿವಾರ ಹಾಕೋಣ. ಇಲ್ಲ ಅಂದರೆ ಶುಕ್ರವಾರವಾದರೂ ಹಾಕೋಣ.

ಶ್ರೀ ಎಸ್. ಬಂಗಾರಪ್ಪ.—ಆ ದಿವಸ ಮುಖ್ಯಮಂತ್ರಿಗಳು ಇಲ್ಲಿರುತ್ತಾರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಇರುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ನಾಳೆ ಇರುತ್ತಾರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಹೌದು, ಇರುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ನಾಳೆಯೇ ಹಾಕಿ.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಮುಕ್ಕಾಲು ಗಂಟೆ ಈ ಮನೆಯ ಸಮಯ ಹಾಳಾಯಿತ್ತು. ನಾನು ಈಗಾಗಲೇ ಹೇಳಿದ್ದೇನೆ, ಇದರಲ್ಲಿ ಮುಚ್ಚಿಡತಕ್ಕಂತಹದ್ದಾಗಲಿ, ನಾಚಿಕೆಯಾಗತಕ್ಕಂತಹದ್ದಾಗಲಿ ಏನೂ ಇಲ್ಲ. ಅದರಲ್ಲಿ ಏಕೆ ತಾವು ಕನಸು ಕಾಣುತ್ತಿದ್ದೀರಾ ?

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ತಾವು ಏಕೆ ಈ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಹಿಂಜರಿಯುತ್ತಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಕೊಗಬೇಡ್ರಿ...

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕೂಡಿ.

(INTERRUPTION)

MR. SPEAKER.—No thing will go on record.

SRI B. RACHAIAH.—Don't do all these things.ಜಾಯಲ್ಲಿ ಏನೂ ನಡೆಯುವುದಿಲ್ಲ.

(INTERRUPTION)

ಶ್ರೀ ಎಸ್. ಬಂಗಾರಪ್ಪ.—ಅದೂ ಕೂಡ ನಡೆಯುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತ್ರೆಟನ್ ಮಾಡುತ್ತೀರಾ ?

(ಗೊಂದಲ)

ಅಧ್ಯಕ್ಷರು.—ನಿಮಗೆ ಉತ್ತರ ಕೊಡಿಸುತ್ತೇನೆ. ಅವರೇನೂ ಉತ್ತರ ಕೊಡುವುದಿಲ್ಲ ಎಂದು ಹೇಳಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನೀವು ತ್ರೆಟನ್ ಮಾಡಿದರೆ ನಾವೂ ತ್ರೆಟನ್ ಮಾಡಬೇಕಾಗುತ್ತದೆ. mind your business...

ಅಧ್ಯಕ್ಷರು.—ಸಿಟ್ಟಿನಿಂದ ಏನೂ ಪ್ರಯೋಜನ ಇಲ್ಲ, ಸಾವಾಧಾನವಾಗಿರಿ.

ಶ್ರೀ ಎಸ್. ಬಂಗಾರಪ್ಪ.—ಇದಕ್ಕೆ ನಿಮ್ಮ ಸೆಕ್ರೇಟರಿಯೇಟ್ ಕಾರಣ. ನೀವು ಏಕೆ ಆ ರೀತಿಯ ಡೈರೆಕ್ಷನ್ ಕೊಟ್ಟಿದ್ದೀರಿ ?

ಅಧ್ಯಕ್ಷರು.—ಶನಿವಾರ ನಿಮಗೆ ಉತ್ತರ ಕೊಡಿಸುತ್ತೇನೆ. ಶನಿವಾರ ಈ ಪ್ರಶ್ನೆಯನ್ನು ಇಟ್ಟಿದ್ದೇನೆ.

(ಗೊಂದಲ)

ಶ್ರೀ ಎಂ. ರಘುಪತಿ.—ಸ್ವಲ್ಪ ಗೌರವ ಕೊಟ್ಟು ಮಾತಾಡಿ. ಆ ರೀತಿ ಹೇಳಬೇಡಿ. ಇದು ನಿಮ್ಮ ಘನತೆಗೆ ಒಳ್ಳೆಯದಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ಮರ್ಯಾದೆಯಿಂದ ಮಾತನಾಡುವುದನ್ನು ಕಲಿತಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಶನಿವಾರ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಈ ಪ್ರಶ್ನೆಯನ್ನು ಶನಿವಾರಕ್ಕೆ ಹಾಕಿದ್ದೇನೆ. ಮುಖ್ಯ ಮಂತ್ರಿಗಳಿಂದ ಉತ್ತರವನ್ನು ಕೊಡಿಸಬೇಕೆಂದು ನೀವು ಹೇಳಿದ್ದೀರಿ, ನಾನು ಎಕ್ಸ್‌ಪೀನ್ ಮಾಡುತ್ತೇನೆಂದು ಹೇಳಿದ್ದೆ. ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಂತ್ತಿದ್ದಾರೆಂದರೆ ನಾನೇ ಉತ್ತರವನ್ನು ಕೊಡುತ್ತೇನೆ ಎಂದು. ಆದ್ದರಿಂದ ಇದನ್ನು ಶನಿವಾರಕ್ಕೆ ಹಾಕಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ಶನಿವಾರ...

ಶ್ರೀ ಎ. ಲಕ್ಷ್ಮೀಸಾಗರ್.—ಇಪತ್ತು ಇವರು ಜಗಳ ಆಡಬೇಕೆಂದು ಬಂದಿದ್ದಾರೆ, ಇವರು ನಿರ್ಧಾರ ಮಾಡಲು ಬಂದಿದ್ದಾರೆ. ಈ ಸಭೆಗೆ ನಿಮಗೆ ಗೌರವವಿಲ್ಲ, ಈ ಸಭೆಗೆ ನಿಮ್ಮಿಂದ ಮರ್ಯಾದೆ ಇಲ್ಲ, ಅಧ್ಯಕ್ಷರ ರೂಲಿಂಗ್ ಅವರಿಗೆ ಬೇಕಾಗಿಲ್ಲ. ಯಾರಿಗೂ ಮರ್ಯಾದೆ ಕೊಡುತ್ತಿಲ್ಲ. ನೀವು ಎಲ್ಲಾ ಈ ರೀತಿ ಮಾಡಿದರೆ ಹೇಗೆ ?

ಶ್ರೀ ಎಸ್. ಬಂಗಾರಪ್ಪ.—ಆ ಮಾತನ್ನು ಅವರು ಹಿಂದಕ್ಕೆ ತೆಗೆದುಕೊಳ್ಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಎಕ್ಸ್‌ಪೀನ್ ಮಾಡಿ ಉತ್ತರ ಕೊಡಿಸುತ್ತೇನೆಂದು ತಾವು ಹೇಳಿದ್ದೀರಿ. ರೂಲಿಂಗ್ ಈಗಾಗಲೇ ಕೊಟ್ಟಿದ್ದೀರಿ. ನಾವು ಈ ಸಭೆಯು ಮುಗಿಯುವುದರೊಳಗಾಗಿ ಉತ್ತರವನ್ನು ಕೊಡಬೇಕೆಂದು ತಾವು ಹೇಳಿದ್ದೀರಿ. ಮತ್ತೆ ಇದನ್ನು ಶನಿವಾರ ಹಾಕುತ್ತೇನೆಂದೂ ಸಹ ಹೇಳಿದ್ದೀರಿ. ಇಷ್ಟೆಲ್ಲಾ ಆದರೂ ತಿರುಗಿ ಇವರು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಅವರಿಗೆ ಈ ಸಭೆಯ ಮರ್ಯಾದೆ ಬೇಕಾಗಿಲ್ಲ, ರೂಲಿಂಗ್ ಬೇಕಾಗಿಲ್ಲ, ಅವರು ಹೇಳಿದ ಹಾಗೆ ಶನಿವಾರ ಉತ್ತರವನ್ನು ಕೊಡಿಸುತ್ತೇನೆಂದು ಹೇಳಿದರೂ ಸಹ ಇವರಿಗೆ ಸಮಾಧಾನ ಇಲ್ಲ, ಅದು ಇವರಿಗೆ ಬೇಕಾಗಿಲ್ಲ, ಮತ್ತೆ ಮತ್ತೆ ಅದೇ ಪ್ರಶ್ನೆಯನ್ನು ಹಾಕುತ್ತಿದ್ದಾರೆ. ಕಾಲು ಕರೆದುಕೊಂಡು ಜಗಳಕ್ಕೆ ಬರುತ್ತಿದ್ದಾರೆ.

ಅವರ ಮನಸ್ಸಿನ ಉದ್ದೇಶ ನಮಗೆ ಗೊತ್ತಿದೆ. ತಾವು ದಯವಾಡಿ ಅದಕ್ಕೆ ಅವಕಾಶ ಕೊಡಬೇಡಿ. ಎಲ್ಲರೂ ಈ ಸಭೆಯಲ್ಲಿ ಸರಿಯಾದ ವರ್ತನೆಯಿಂದ ನಡೆದುಕೊಳ್ಳೋಣ. ಬಹಳ ರಿಗ್ರೆಟ್‌ನಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಮನಸ್ಸು ತುಂಬಾ ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಅಧ್ಯಕ್ಷರ ರೂಲಿಂಗ್ ನಿಮಗೆ ಬೇಕಾಗಿಲ್ಲ, ನಿಯಮಾವಳಿಗಳು ಬೇಕಾಗಿಲ್ಲ. ನೀವು ಹೇಳಿದ ಹಾಗೆ ಉತ್ತರವನ್ನು ತರಿಸಿಕೊಡುತ್ತೇವೆಂದು ಹೇಳಿದರೂ ಅದು ಬೇಕಾಗಿಲ್ಲ. ಮತ್ತೆ ಮತ್ತೆ.. ಶ್ರೀ ಖಾರ್ಗೆ ಯವರು ಮುಖ್ಯ ಮಂತ್ರಿಗಳು ಉತ್ತರಕೊಡಬೇಕೆಂದು ಹೇಳುತ್ತಿದ್ದಾರೆ. ಶನಿವಾರ ಇದನ್ನು ತೆಗೆದುಕೊಳ್ಳಬಹುದೆಂದು ತಾವು ಹೇಳಿದ್ದೀರಿ, ಆದ್ದರಿಂದ ತಾವು ದಯವಾಡಿ ಈ ಸಭೆಯನ್ನು ನಡೆಸಲು ಅವಕಾಶ ಮಾಡಿ ಕೊಡಿ.

ಅಧ್ಯಕ್ಷರು.—ನಾನು ಈ ಪ್ರಶ್ನೆಗೆ ಶನಿವಾರ ಉತ್ತರವನ್ನು ಕೊಡಿಸುತ್ತೇನೆ. ಶನಿವಾರ ಈ ಪ್ರಶ್ನೆಯನ್ನು ತೆಗೆದುಕೊಳ್ಳೋಣ. ಇದು ನನ್ನ ಸೆಕೆಂಡ್ ರೂಲಿಂಗ್. ಈ ರೂಲಿಂಗ್‌ಗೆ ಮನ್ನಣೆ ಕೊಡುವುದಿಲ್ಲವೆಂದರೆ it amounts to contempt of the House.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ. – ಮಾತುಮಾತಿಗೆ ಈ ಸಭೆಯ ಕಾಲವನ್ನು ವಿನಾಕಾರಣ ಕಳೆಯುತ್ತೇವೆಂದು ಮಾನ್ಯ ಲಕ್ಷ್ಮೀಸಾಗರ್ ಅವರು ಹೇಳುತ್ತಿದ್ದಾರೆ. ಮಾನ್ಯ ಲಕ್ಷ್ಮೀಸಾಗರ್ ಅವರು ಎಷ್ಟು ಕಾಲ ತೆಗೆದುಕೊಂಡಿದ್ದಾರೆ ಅಷ್ಟನ್ನು ಯಾರೂ ತೆಗೆದುಕೊಂಡಿಲ್ಲ, ತಾವು ದಾಖಲಾತಿಯನ್ನು ತೆಗೆಸಿ ನೋಡಿ ಗೊತ್ತಾಗುತ್ತದೆ. ಇವರು ಮಾತನಾಡುವಷ್ಟು ಯಾರೂ ಮಾತನಾಡುವುದಿಲ್ಲ. ಇಲ್ಲಿ ನಾವು ಯಾರೂ ಕಾಲ ಕಳೆಯಲು ಬಂದಿಲ್ಲ.

ಅಧ್ಯಕ್ಷರು.—ಎಕ್ಸಾಮಿನ್ ಮಾಡುತ್ತೇನೆಂದು ಹೇಳಿದ್ದೆ ಈ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿದ್ದೇನೆಂದು ಹೇಳಿದೆ. ಈಗ ಸೆಕೆಂಡ್ ರೂಲಿಂಗ್ ಕೊಟ್ಟಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಶನಿವಾರ ಉತ್ತರವನ್ನು ಕೊಡುತ್ತಾರೆ. This question has been deferred to Saturday morning. Please don't protest against the decision of the Speaker.

ಶ್ರೀ ಎಸ್. ಬಂಗಾರಪ್ಪ.—ತಾವು ರೂಲಿಂಗ್ ಕೊಟ್ಟಿದ್ದೀರಿ, ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಶನಿವಾರ ಉತ್ತರವನ್ನು ಕೊಡಿಸುತ್ತೇನೆಂದು ಹೇಳಿದ್ದೀರಿ, ಸಂತೋಷ. ಶ್ರೀ ಲಕ್ಷ್ಮೀಸಾಗರ್ ಅವರು ಮರ್ಯಾದೇತರು ಎಂಬ ಮಾತನ್ನು ಹೇಳಿದ್ದಾರೆ. ಆ ಮಾತನ್ನು ಅವರು ಹಿಂದಕ್ಕೆ ತೆಗೆದುಕೊಳ್ಳಬೇಕು ಇಲ್ಲದಿದ್ದರೆ ನಾವು ಸಹ ಅವರನ್ನು ಏನೆಂದು ಕರೆಯಬೇಕಾಗುತ್ತದೆ ಎಂದರೆ ''ನೀವು ಮಹಾ ಮರ್ಯಾದೇತರು'' ಎಂದು.

(ಗೊಂದಲ)

SRI A. LAKSHMI SAGAR.—Very good.

ಅಧ್ಯಕ್ಷರು.—೨೨೪ ಜನರೂ ಬಹಳ ಉತ್ತಮರು, ಮರ್ಯಾದಸ್ಥರು, ಗೌರವಾನ್ವಿತರು ಎಂದು ನಾವು ತಿಳಿದುಕೊಂಡಿದ್ದೇವೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮತ್ತು ಮರ್ಯಾದೆಯುತ...

(ಗೊಂದಲ)

ರಾಜ್ಯದಲ್ಲಿ ಬಸ್‌ಮಾರ್ಗಗಳ ರಾಷ್ಟ್ರೀಕರಣ

೧೩೭೭. ಶ್ರೀ ಜಿ. ರಾಜಗೌಡ (ಹನೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಈ ವರ್ಷ ಯಾವ ಯಾವ ಜಿಲ್ಲೆಯಲ್ಲಿ ಬಸ್‌ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಲು ತೀರ್ಮಾನಿಸಲಾಗಿದೆ,